**ದಿನಾಂಕ: 20.02.2021 ರಂದು ವಾರ್ಡ್ ಸಂಖ್ಯೆ 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀಮತಿ ಚೈತ್ರಾ ಹೊನ್ನಾಪುರ– ವಾರ್ಡ್ ಸಮಿತಿ ನೋಡಲ್ ಅಧಿಕಾರಿ
2. ಶ್ರೀ ನರೇಂದ್ರ ಕುಮಾರ್.ಎ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 184 ಉತ್ತರಹಳ್ಳಿ)
3. ಶ್ರೀಮತಿ ಎನ್.ಪ್ರಮೀಳಾ – ಉತ್ತರಹಳ್ಳಿ ಪಿ.ಹೆಚ್.ಸಿ
4. ಶ್ರೀ ಅನಿಲ್ ಕುಮಾರ್ – ಸಹಾಯಕ ಅಭಿಯಂತರರು ಬೆಸ್ಕಾಂ,
5. ಶ್ರೀ ಸಿದ್ದರಾಜು – ಎಲೆಕ್ಟ್ರೀಷಿಯನ್, ಬೀದಿ ದೀಪ ಇಲಾಖೆ,
6. ಶ್ರೀ ಮೂರ್ತಿ – ಸಹಾಯಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
7. ಶ್ರೀ ಹೆಚ್.ನರಸಪ್ಪ – ತೋಟಗಾರಿಕೆ ಅಧೀಕ್ಷಕ ಕಛೇರಿಯ ಸಹಾಯಕರು,
8. ಶ್ರೀ ರವೀಂದ್ರ – ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
9. ಶ್ರೀ ಶಿವರಾಜು – ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
10. ಶ್ರೀ ಶಿವರಾಜು – ವಾರ್ಡ್ ಮಾರ್ಷಲ್, ವಾರ್ಡ್ ಸಂಖ್ಯೆ 184

**ಹಾಜರಿದ್ದ ಸಮಿತಿ ಸದಸ್ಯರು:-**

1. ಶ್ರೀ ಆನಂದ್ ಮೂರ್ತಿ –ಫಾರ್ಮ್ ಸ್ಪ್ರಿಂಗ್ ಬಡಾವಣೆ RWA
2. ಶ್ರೀ ದತ್ತಾತ್ರೇಯ ಪ್ರಸಾದ್–ಎ.ಜಿ.ಎಸ್ ಬಡಾವಣೆ RWA
3. ಶ್ರೀ ಎಂ.ವಿ.ಶ್ರೀಧರ್ ರಾವ್–ಫಾರ್ಮ್ ಗ್ರೂವ್ ಎನ್‌ಕ್ಲೇವ್ RWA
4. ಶ್ರೀ ಸಂದೀಪ್ ಜಾಧವ್ –ಫಾರ್ಮ್ ಗ್ರೂವ್ ಎನ್‌ಕ್ಲೇವ್ RWA
5. ಶ್ರೀ ನಾಗೇಶ್ವರ್ ರಾವ್ ಎನ್.ವಿ.ಎಸ್ – ಫಾರ್ಮ್ ಸ್ಪ್ರಿಂಗ್ ಬಡಾವಣೆ RWA
6. ಶ್ರೀ ಅರುಣ್ – ಎ.ಜಿ.ಎಸ್ ಬಡಾವಣೆ RWA
7. ಶ್ರೀ ಅಮರ್.ಎಂ.ಆರ್ – ಎ.ಜಿ.ಎಸ್ ಬಡಾವಣೆ RWA
8. ಶ್ರೀಮತಿ ಮಮತಾ ಶ್ರೀನಿವಾಸ್ – RWA
9. ಶ್ರೀಮತಿ ಅರುಣಾ – ಬನಶಂಕರಿ 5ನೇ ಹಂತ, ಬಡಾವಣೆ RWA

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀಮತಿ ಚೈತ್ರಾ ಹೊನ್ನಾಪುರ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

Scanned with CamScanner

1. **ಬೆಂಗಳೂರು ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

- ಜಯನಗರ ಹೆಚ್.ಬಿ.ಎಸ್.ಎಸ್ ಬಡಾವಣೆ ತುರಹಳ್ಳಿ ಭಾಗಕ್ಕೆ ಕುಡಿಯುವ ನೀರಿನ ಸಂಪರ್ಕ ನೀಡಬೇಕಾಗಿ ಕೋರಿರುತ್ತಾರೆ.
- ಎಸ್.ಜಿ.ಎಸ್ ಬಡಾವಣೆ 21ನೇ ಮುಖ್ಯರಸ್ತೆಯಲ್ಲಿನ ಛೇಂಬರ್ ತುಂಬಿ ಹರಿಯುತ್ತಿದ್ದು, ಇದರಿಂದ ಎಲ್ಲಾ ಸ್ಯಾನಿಟರಿ ಕೊಳವೆಗಳು ಮುಚ್ಚಿಹೋಗಿದ್ದು, ಇದನ್ನು ಕೂಡಲೇ ಸರಿಪಡಿಸಬೇಕಾಗಿ ಕೋರಿರುತ್ತಾರೆ.

ಈ ಬಗ್ಗೆ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ರವರಿಗೆ ಸೂಚಿಸಿರುತ್ತಾರೆ.

2. **ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

- ಫಾಮ್ ಸ್ಪ್ರಿಂಗ್ ಬಡಾವಣೆಯಲ್ಲಿನ ಕೆಲವು ರಸ್ತೆಗಳಲ್ಲಿ ಓವರ್ ಹೆಡ್ ಕಾಮಗಾರಿ ಆಗದೇ ಇರುವ ಬಗ್ಗೆ ದೂರಿ ಸದರಿ ಕಾಮಗಾರಿಯನ್ನು ಕೂಡಲೇ ಮಾಡಬೇಕಾಗಿ ಕೋರಿರುತ್ತಾರೆ.
- ಅರೆಹಳ್ಳಿ ಸಬ್ ಸ್ಟೇಷನ್ ಬಳಿಯ ಹೈ ಟೆನ್ಷನ್ ಟವರ್‌ಗಳ ತಳದಲ್ಲಿ ಫೆನ್ಸಿಂಗ್ ಅನ್ನು ಮಾಡಿಕೊಡಬೇಕಾಗಿ ಕೋರಿರುತ್ತಾರೆ.
- ಅರೆಹಳ್ಳಿ ಸಬ್ ಸ್ಟೇಷನ್ ಹಿಂಭಾಗದ ಕಾಂಪೌಂಡ್‌ಗೆ ಸಾರ್ವಜನಿಕರು ಮೂತ್ರ ವಿಸರ್ಜನೆ ಮಾಡುತ್ತಿದ್ದು, ಆದರೆ ಸದರಿ ಕಾಂಪೌಂಡ್ ಪ್ರದೇಶದಲ್ಲಿ ಅತ್ಯಧಿಕ ಎಲೆಕ್ಟ್ರಿಕ್ ಕಿಡಿಗಳು ಬರುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಯಾವುದೇ ತರಹದ ಸಂಭವ ಆಗುತ್ತದೆ ಎಂದು ಈ ಬಗ್ಗೆ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.
- ಬೆಸ್ಕಾಂ ಇಲಾಖೆಯಿಂದ ಅಂತರ್ಗತ ಕೇಬಲ್ ಅಳವಡಿಸಲು ವಾರ್ಡ್ ವ್ಯಾಪ್ತಿಯ ಅರೆಹಳ್ಳಿ ಮತ್ತು ಉತ್ತರಹಳ್ಳಿ ಪ್ರದೇಶದಲ್ಲಿ ಮಾಡಿರುವಂತಹ ರಸ್ತೆ ಗುಂಡಿಗಳು, ಉದ್ದದ ರಸ್ತೆ ಅಗೆತಗಳನ್ನು ಕೂಡಲೇ ಪುನರ್ ನಿರ್ಮಿಸಿ ಡಾಂಬರುಅನ್ನು ಅಳವಡಿಸಬೇಕಾಗಿ ಸಾರ್ವಜನಿಕರು ಕೋರಿರುತ್ತಾರೆ.
- ಬೆಸ್ಕಾಂ ಇಲಾಖೆಯಿಂದ ಅಂತರ್ಗತ ಕೇಭಲ್ ಅಳವಡಿಸುವ ಸಂದರ್ಭದಲ್ಲಿ ಅತಿಥಿ ಶಾಲೆಯ ಹತ್ತಿರ ಕುಡಿಯುವ ನೀರಿನ ಕೊಳವೆ ಹಾಳಾಗಿದ್ದು, ಇದನ್ನು ಕೂಡಲೇ ದುರಸ್ಥಿಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

3. **ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಪಟ್ಟಂತೆ.**

- ಎ.ಜಿ.ಎಸ್.ಬಡಾವಣೆ ಪಾರ್ಕ್-1 ರಲ್ಲಿನ ಸ್ವಿಚ್ ಹಾಳಾಗಿದ್ದು, ಇದನ್ನು ಬದಲಾವಣೆ ಮಾಡಬೇಕಾಗಿ ಕೋರಿರುತ್ತಾರೆ.
- 19ನೇ ಮುಖ್ಯರಸ್ತೆಯಲ್ಲಿನ ಪಾರ್ಕ್‌ನ ದೀಪಗಳು ಹಾಳಾಗಿರುವ ಬಗ್ಗೆ ದೂರಿರುತ್ತಾರೆ.
- 8ನೇ ಕ್ರಾಸ್ ಫಾಮ್‌ಸ್ಪ್ರಿಂಗ್ ಬಡಾವಣೆಯಲ್ಲಿ ಹಾಗೂ ಫಾಮ್ ಗ್ರೂವ್ ಬಡಾವಣೆಯಲ್ಲಿ ಬೀದಿ ದೀಪಕ್ಕೆ ಆಟೋಮೆಟಿಕ್ ಸ್ವಿಚ್ ಅಳವಡಿಸಲು ಕೋರಿರುತ್ತಾರೆ.
- ಬಿಡಿಎ ಬನಶಂಕರಿ 5ನೇ ಹಂತ 7ನೇ ಮುಖ್ಯರಸ್ತೆ ಹಾಗೂ ಪಟಾಲಮ್ಮ ದೇವಸ್ಥಾನ ಮುಂಭಾಗದ ರಸ್ತೆಯಲ್ಲಿ ಬೀದಿ ದೀಪವನ್ನು ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಎಲೆಕ್ಟ್ರಿಕಲ್ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ.

Scanned with CamScanner

4. **ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ**

- ವಾರ್ಡ್ ವ್ಯಾಪ್ತಿಯಲ್ಲಿ ಮರದ ಎಲೆಗಳನ್ನು ತೆರವುಗೊಳಿಸದೇ ಇರುವ ಬಗ್ಗೆ ದೂರಿರುತ್ತಾರೆ.
- ಗುಬ್ಬಲಾಳ ಮುಖ್ಯರಸ್ತೆಯಲ್ಲಿ ಬ್ಲಾಕ್ ಸ್ಪಾಟ್‌ಆಗಿದ್ದು, ಇದನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ 19ನೇ ಮತ್ತು 20ನೇ ಮುಖ್ಯರಸ್ತೆ ಪಾರ್ಕ್ ಬಳಿಯಲ್ಲಿ ಸಮೀಪದ ಸ್ಲಂ ಬಡಾವಣೆಗಳಿಂದ ಘನತ್ಯಾಜ್ಯವನ್ನು ತಂದು ಸುರಿಯುತ್ತಿರುವ ಬಗ್ಗೆ ದೂರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ 22ನೇ ಮುಖ್ಯರಸ್ತೆ ಬಳಿಯ ವಿಜಯ್ ಒಯಾಸಿಸ್ ವಸತಿ ಸಮುಚ್ಚಯ ಮುಂಭಾಗದ ಕಾರ್ನರ್ ನಿವೇಶನದಲ್ಲಿ ಘನತ್ಯಾಜ್ಯವನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ 10ನೇ ಮತ್ತು 11ನೇ ಮುಖ್ಯರಸ್ತೆಯ ಮೂಲೆ ನಿವೇಶನದಲ್ಲಿ ಘನತ್ಯಾಜ್ಯ ಸುರಿದು ಬ್ಲಾಕ್ ಸ್ಪಾಟ್ ಆಗಿದ್ದು, ಇಲ್ಲಿ ಘನತ್ಯಾಜ್ಯವನ್ನು ಸುಡುತ್ತಿರುವ ಬಗ್ಗೆ ದೂರಿರುತ್ತಾರೆ.
- ಬನಶಂಕರಿ 5ನೇ ಹಂತ ನೈಸ್ ರಸ್ತೆಯ ಅಂಡರ್ ಪಾಸ್ ಬಳಿಯ ತೆರೆದ ಪ್ರದೇಶದಲ್ಲಿ ಘನತ್ಯಾಜ್ಯವನ್ನು ಸುಡುತ್ತಿರುವ ಬಗ್ಗೆ ದೂರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಹಾಗೂ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ರವರಿಗೆ ಸೂಚಿಸಿರುತ್ತಾರೆ.

5. **ತೋಟಗಾರಿಕೆ / ಯೋಜನಾ ಇಲಾಖೆಗೆ ಸಂಬಂಧಪಟ್ಟಂತೆ**

- ಎ.ಜಿ.ಎಸ್ ಬಡಾವಣೆಯ ಪಾರ್ಕ್ ನಂ. 3 & 4 ರಲ್ಲಿ ಯಾವುದೇ ಕಾವಲುಗಾರ ಇಲ್ಲದೇ ಇರುವುದರಿಂದ ಸದರಿ ಪಾರ್ಕ್‌ಗಳಲ್ಲಿ ಅನಿಯಮಿತವಾಗಿ ಸಾರ್ವಜನಿಕರು ಓಡಾಡುತ್ತಿದ್ದು, ಈ ಪಾರ್ಕ್‌ಗಳಿಗೆ ಪ್ರತ್ಯೇಕ ಕಾವಲುಗಾರರನ್ನು ನೇಮಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ 22ನೇ ಮುಖ್ಯರಸ್ತೆಯ ಪಾರ್ಕ್‌ಅನ್ನು ನಿರ್ವಹಣೆ ಮಾಡುತ್ತಿಲ್ಲವೆಂದು ದೂರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ ಪಾರ್ಕ್‌ಗಳಲ್ಲಿನ ಪಾತ್‌ವೇ ದುರಸ್ಥಿ ಹಾಗೂ ಹೊಸದಾಗಿ ಕಾವಲುಗಾರ ಶೆಡ್ ಅನ್ನು ನಿರ್ಮಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ವಲಯ ತೋಟಗಾರಿಗೆ ಅಧೀಕ್ಷಕರು ಮತ್ತು ಕಾರ್ಯಪಾಲಕ ಅಭಿಯಂತರರು ಯೋಜನೆ ವಿಭಾಗ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ

6. **ಉತ್ತರಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಂತೆ**

- ಗುಬ್ಬಲಾಳ ಮುಖ್ಯರಸ್ತೆಯಿಂದ ಹಿಲ್ ಸೈಡ್ ಸ್ಕೂಲ್ ರಸ್ತೆ ಸುಮಾರು 250.00 ಮೀಟರ್‌ಗಳನ್ನು ಡಾಂಬರೀಕರಣ ಮಾಡಲು ಕೋರಿರುತ್ತಾರೆ.
- ಫಾಮ್ ಗ್ರೂವ್ ಎನ್‌ಕ್ಲೇವ್ ಬಡಾವಣೆಯ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಮತ್ತು ರಸ್ತೆ ಬದಿ ಚರಂಡಿಗಳನ್ನು ಅಭಿವೃದ್ಧಿಪಡಿಸಲು ಹಾಗೂ ಸದರಿ ಬಡಾವಣೆಯ ಬೋರ್‌ವೆಲ್ ಅನ್ನು ದುರಸ್ಥಿಗೊಳಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ 21ನೇ ಮತ್ತು 22ನೇ ಮುಖ್ಯರಸ್ತೆಯಲ್ಲಿ ಕಲ್‌ವರ್ಟ್‌ಗಳನ್ನು ನಿರ್ಮಾಣ ಮಾಡಲು ಕೋರಿರುತ್ತಾರೆ ಹಾಗೂ ಸದರಿ ರಸ್ತೆ ಬದಿ ಚರಂಡಿಯ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ ಸರ್ವಜ್ಞ ವೃತ್ತದ ರಸ್ತೆಯನ್ನು ಕೂಡಲೇ ಡಾಂಬರೀಕರಣಗೊಳಿಸಬೇಕಾಗಿ ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ ಬಸ್ ರೂಟ್ ಆದ 3ನೇ ಮುಖ್ಯರಸ್ತೆಯಿಂದ 13ನೇ ಮುಖ್ಯರಸ್ತೆಯವರೆಗಿನ ರಸ್ತೆ ಬದಿಯ ಚರಂಡಿಯನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ 19ನೇ ಮತ್ತು 22ನೇ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಕೋರಿರುತ್ತಾರೆ

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಉಪವಿಭಾಗ ರವರಿಗೆ ಸೂಚಿಸಿರುತ್ತಾರೆ

Scanned with CamScanner

7. <u>ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಬೊಮ್ಮನಹಳ್ಳಿ ವಲಯ ಸಂಬಂಧಪಟ್ಟಂತೆ</u>

- ಗುಬ್ಬಲಾಳ ಮುಖ್ಯರಸ್ತೆಯಲ್ಲಿ ರಸ್ತೆ ಹಂಪ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.
- ಗುಬ್ಬಲಾಳ ಮುಖ್ಯರಸ್ತೆ ರಾಘವೇಂದ್ರ ಹೋಟೆಲ್ ಬಳಿ ಅತಿ ಭಾರದ ವಾಹನ ನಿಲುಗಡೆಯನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಗುಬ್ಬಲಾಳದಿಂದ ಗುಬ್ಬಲಾಳ ಜಂಕ್ಷನ್ ವರೆಗೆ ಪಾದಚಾರಿ ಮಾರ್ಗವನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಚೈತ್ರಾ ಹೊನ್ನಾಪುರ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಶ್ರೀಮತಿ ಚೈತ್ರಾ ಹೊನ್ನಾಪುರ<br>ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾನೂನು ಅಧಿಕಾರಿ<br>ಕೇಂದ್ರ ಕಛೇರಿ | ಶ್ರೀ ನರೇಂದ್ರ ಕುಮಾರ್.ಎ<br>ಸಂಚಾಲಕರು ಹಾಗೂ ಸ.ಅ–184 |

Scanned with CamScanner